ದಿಃ18.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಮುಖ್ಯವಿಚಾರಣೆಃ ವಾದಿ ಪರ ಶ್ರೀ ವಿ.ವಿ ವಕೀಲರಿಂದ ,**

1. ಸರ್ವೆ ನಂ.04 ರ Index of land ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-06 ಎಂದು ಗುರುತಿಸಲಾಯಿತು.
2. ಆರ್.ಟಿ.ಸಿ ಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-07 ಎಂದು ಗುರುತಿಸಲಾಯಿತು.
3. ಸರ್ವೆ ನಂ.02 ರ Index of land ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-08 ಎಂದು ಗುರುತಿಸಲಾಯಿತು.
4. ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-09 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿಃ 24.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ ವಕೀಲರಿಂದ ,**

1. ರಾಮಗಿರಿಯವರ ಮೊದಲನೇ ಹೆಂಡತಿ ಸುಬ್ಬಬಾಯಿಯವರಿಗೆ ದ್ವಾರಕಗಿರಿ, ಸೋನಾ ಬಾಯಿ ಮತ್ತು ರುಕ್ಮಾ ಬಾಯಿ ಅಲಿಯಾಸ್ ರುಕ್ಮಿಣಿ ಬಾಯಿ ಎಂಬ ಮೂರು ಜನ ಮಕ್ಕಳು ಇದ್ದಾರೆ. ರಾಮಗಿರಿಯವರ ಎರಡನೇ ಹೆಂಡತಿ ಗಂಗಾಬಾಯಿಗೆ ಗಂಗಾಗಿರಿ ಅಲಿಯಾಸ್ ಗಂಗಾರಾಮ್ ಸಿಂಗ್ , ನಾರಾಯಣ ಗಿರಿ ಅಲಿಯಾಸ್ ನಾರಾಯಣ್ ಸಿಂಗ್ ಮತ್ತು ಸರಸ್ವತಿ ಬಾಯಿ ಎಂಬ ಮೂರು ಜನ ಮಕ್ಕಳಿದ್ದರು. ಮೇಲೆ ಹೇಳಿದ ಹೆಸರಿನವರು ಯಾರು ಜೀವಂತವಿರುವುದಿಲ್ಲ.

2. ಪ್ರತಿವಾದಿ 01 ರಿಂದ 10 ರವರು ದ್ವಾರ್ಕಗಿರಿಯವರ ಮಕ್ಕಳು ಎಂದರೆ ಸರಿ. 11 ನೇ ಪ್ರತಿವಾದಿ 05 ನೇ ಪ್ರತಿವಾದಿ ನಾಗೇಂದ್ರಗಿರಿಯವರ ಹೆಂಡತಿ ಎಂದರೆ ಸರಿ. ಸುಬ್ಬಬಾಯಿಯ ಮಗಳು ಸೋನಾ ಬಾಯಿರವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ.

3. ರುಕ್ಮಿಣಿ ಬಾಯಿರರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ಗಂಗಾಗಿರಿ ಅಲಿಯಾಸ್ ಗಂಗಾರಾಮ್ ಸಿಂಗ್, ನಾರಾಯಣ ಗಿರಿ ಅಲಿಯಾಸ್ ನಾರಾಯಣ್ ಸಿಂಗ್ ಮತ್ತು ಸರಸ್ವತಿ ಬಾಯಿರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ.

4. ಗಂಗಾಗಿರಿ, ನಾರಾಯಣಗಿರಿಯವರಿಗೆ ಮೂರು ಮತ್ತು ಏಳು ಜನ ಮಕ್ಕಳಿರುತ್ತಾರೆ ಎಂದರೆ ಸರಿ. ಸರಸ್ವತಿ ಬಾಯಿಯವರಿಗೆ ಮೂರು ಜನ ಮಕ್ಕಳಿರುತ್ತಾರೆ ಎಂದರೆ ಸರಿಯಲ್ಲ. ಇವರ್ಯಾರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ.

5. ನನ್ನ ಅಜ್ಜ ರಾಮಗಿರಿಗೆ ಎಷ್ಟು ಆಸ್ತಿ ಇತ್ತು ಎಂದು ಸರಿಯಾಗಿ ಗೊತ್ತಿರುವುದಿಲ್ಲ. ನನ್ನ ಅಜ್ಜ ರಾಮಗಿರಿಯವರು ಮೃತರಾದ ನತಂರ, ಅವರ ಮಕ್ಕಳು ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡಿರತ್ತಾರೆಂದರೆ ಸರಿ, ಸಾಕ್ಷಿಯು ಮುಂದುವರೆದು ದಾವಾಸ್ವತ್ತನ್ನು ಹೊರತು ಪಡಿಸಿ ಬೇರೆ ಆಸ್ತಿಗಳನ್ನು ಹಂಚಿಕೆ ಮಾಡಿಕೊಂಡಿರುತ್ತಾರೆಂದು ಹೇಳಿರುತ್ತಾರೆ. 1984 ರಲ್ಲಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. 1984 ರಲ್ಲಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡ ಸಂದರ್ಭ ದಲ್ಲಿ ವಿಭಾಗ ಪತ್ರವನ್ನು ಬರೆದಿದ್ದು, ಅದನ್ನು ಉಪನೊಂದಣಾಧಿಕಾರಿ ಕಚೇರಿ ಯಲ್ಲಿ ನೊಂದಣಿ ಮಾಡಿಸಿಕೊಂಡಿರುತ್ತಾರೆ. ದ್ವಾರ್ಕಗಿರಿ, ಗಂಗಾಗಿರಿ ಮತ್ತು ನಾರಾಯಣಗಿರಿಯವರು ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ವಿಭಾಗ ಮಾಡಿಕೊಂಡ ಆಸ್ತಿಯಲ್ಲಿ ದ್ವಾರ್ಕಗಿರಿಯವರಿಗೆ ಸರ್ವೆ ನಂ. 50 ಮತ್ತು ಸರ್ವೆ ನಂ. 52 ರಲ್ಲಿ 04 ಎಕರೆ 11 ಗುಂಟೆ ಅವರ ಪಾಲಿಗೆ ಹೋಗಿರುತ್ತದೆ, ಗಂಗಾಗಿರಿಯವರಿಗೆ ಸರ್ವೆ ನಂ. 52 ರಲ್ಲಿ 03 ಎಕರೆ 1 ಅವರ ಪಾಲಿಗೆ ಹೋಗಿರುತ್ತದೆ, ನಾರಾಯಣಗಿರಿಯವರಿಗೆ ಸರ್ವೆ ನಂ. 50 ರಲ್ಲಿ 02 ಎಕರೆ ಮತ್ತು ಸರ್ವೆ ನಂ. 52 ರಲ್ಲಿ 03 ಎಕರೆ 20 ಗುಂಟೆ ಅವರ ಪಾಲಿಗೆ ಹೋಗಿರುತ್ತದೆ.

6. ರಾಮಗಿರಿಯವರಿಗೆ ಮೇಲೆ ಹೇಳಿದ ಸರ್ವೆ ನಂ. 50 ಮತ್ತು ಸರ್ವೆ ನಂ. 52 ರಲ್ಲಿರುವ ಜಮೀನಿನ ಜೊತೆಗೆ ಸರ್ವೆ ನಂ. 04 ರಲ್ಲೂ ಸಹ ಅವರ ಹೆಸರಿಗೆ ಜಮೀನು ಇತ್ತು. ವಿಭಾಗ ಪತ್ರದಲ್ಲಿ ದಾವಾ ಸರ್ವೆ ನಂ.04 ರ ಬಗ್ಗೆ ಯಾವುದೇ ಉಲ್ಲೇಖ ಮಾಡಿರುವುದಿಲ್ಲ. ಯಾವಾ ಕಾರಣಕ್ಕಾಗಿ ವಿಭಾಗ ಪತ್ರದಲ್ಲಿ ದಾವಾ ಸರ್ವೆ ನಂ.04 ಅನ್ನು

ಸೇರಿಸಿಲ್ಲ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗ ಪತ್ರದಲ್ಲಿ ನನ್ನ ತಂದೆ ನಾರಾಯಣಗಿರಿ ಸಹ ಪಕ್ಷಗಾರರಾಗಿದ್ದು. ನನ್ನ ತಂದೆ ನಾರಾಯಣಗಿರಿಯವರು ವಿಭಾಗ ಪತ್ರವಾದ ನಂತರ ಸುಮಾರು 30 ವರ್ಷಗಳ ಕಾಲ ಬದುಕಿದ್ದರು. ನನ್ನ ತಂದೆ ಜೀವಿತಾ ಅವಧಿಯಲ್ಲಿ ನಮ್ಮ ಕುಟುಂಬದಲ್ಲಿನ ದಾವಾಸ್ವತ್ತು ಬಿಟ್ಟು ಹೋಗಿರುತ್ತದೆ ಅದನ್ನು ಭಾಗ ಮಾಡಿಕೊಡಿ ಎಂದು ಕೇಳಿ ದಾವೆ ಮಾಡಿರುವುದಿಲ್ಲ. ಗಂಗಾರಾಮ್ ಗಿರಿ ಅಥವಾ ಅವರ ವಾರಸುದಾರರಾಗಲೀ ನಮ್ಮ ಕುಟುಂಬದಲ್ಲಿ ದಾವಾಸ್ವತ್ತು ಬಿಟ್ಟು ಹೋಗಿರುತ್ತದೆ ಅದನ್ನು ಭಾಗ ಮಾಡಿಕೊಡಿ ಎಂದು ಕೇಳಿ ದಾವೆ ಮಾಡಿರುವುದಿಲ್ಲ.

7. ನನ್ನ ತಂದೆ ಮತ್ತು ಗಂಗಾರಾಮ್ ಗಿರಿಯವರಿಗೆ ಮನೆಯ ವ್ಯವಹಾರ ನೋಡಿಕೊಳ್ಳುವುದು ಮತ್ತು ಹೊರಗಡೆ ವ್ಯವಹಾರಗಳ ಬಗ್ಗೆ ತಿಳುವಳಿಕೆ ಇತ್ತು ಎಂದರೆ ಸರಿ. ನನ್ನ ತಂದೆಯು ಅವರಿಗೆ ಸೇರಿದ ಆಸ್ತಿಗಳನ್ನು ಅವರ ವಾರಸುದಾರರ ಹೆಸರಿಗೆ ಮರಣಶಾಸನ ಬರೆದಿದ್ದರು. ಸುಮಾರು 18 ಎಕರೆಗಳಿಗೆ ನನ್ನ ತಂದೆ ಮರಣಶಾಸನವನ್ನು ಬರೆದಿದ್ದರು. ನನ್ನ ತಂದೆ ಯಾವಾಗ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ಗಂಗಾರಾವ್ ಗಿರಿ ಮತ್ತು ದ್ವಾರಕಗಿರಿಯವರು ಎಷ್ಟು ಆಸ್ತಿಗಳನ್ನು ಸಂಪಾದನೆ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಗಂಗಾರಾವ್ ಗಿರಿ ಮತ್ತು ದ್ವಾರಕಗಿರಿಯವರು ಬೇರೆ ಬೇರೆ ಊರುಗಳಲ್ಲಿ ಗುತ್ತಿಗೆಗೆ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

8. ದ್ವಾರಕಗಿರಿಯವರಿಗೆ ಭೂನ್ಯಾಯಾಮಂಡಳಿಯಿಂದ ಎಷ್ಟು ಜಮೀನು ಮಂಜೂರಾಗಿತ್ತು ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ತಂದೆ ಮರಣ ಶಾಸನದಲ್ಲಿ ಬರೆದಂತಹ ಆಸ್ತಿಗಳನ್ನು ಈ ದಾವೆಯಲ್ಲಿ ಒಟ್ಟು ಕುಟುಬಂದ ಆಸ್ತಿಗಳೆಂದು ಸೇರಿಸಿರುವುದಿಲ್ಲ. ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿವಾಗಿ ಆಸ್ತಿಗಳು ಬಂದಿದ್ದವು ಮತ್ತು ಸ್ವತಂತ್ರವಾಗಿ ಎಷ್ಟು ಆಸ್ತಿಗಳನ್ನು ಸಂಪಾದನೆ ಮಾಡಿದ್ದರು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

9. ನಮ್ಮ ಪಂಗಡದಲ್ಲಿ ತುಂಬಾ ಜನರಿಗೆ ರಾಮಗಿರಿ ಎಂಬ ಹೆಸರನ್ನು ಇಡುತ್ತಾರೆಂದರೆ ಸರಿ. ರುಕ್ಮಿಣಿ ಬಾಯಿಯವರ ಮಗನ ಹೆಸರು ಸಹ ರಾಮಗಿರಿ ಎಂದರೆ ಸರಿ. ರಾಮಗಿರಿ ಎಂದು ಹೆಸರು ಇರುವ ವ್ಯಕ್ತಿಗಳು ಬಾಬಳ್ಳಿಯಲ್ಲಿ ತುಂಬಾ ಜನರಿರುತ್ತಾರೆ ಎಂದರೆ ಸರಿ. ದಾವಾಸ್ವತ್ತು ಮೂಲತಹಃ ನನ್ನ ಅಜ್ಜ ರಾಮಗಿರಿಯವರಿಗೆ ಸೇರಿರುತ್ತದೆ ಅದರ ಬಗ್ಗೆ ನಾನು ಮಂಜೂರಾತಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಿಪಿ–01ರ ಪ್ರಕಾರ ದ್ವಾರಕಗಿರಿಯವರು ಶಂಭೂರುದ್ರಪ್ಪನವರಿಂದ ದಾವಾಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದ್ವಾರಕಗಿರಿಯವರಿಗೆ ಎಷ್ಟು ಆಸ್ತಿ ಇತ್ತು ಎಂಬುದರ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯ ಪಿತ್ರಾರ್ಜಿತ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲ ಎಂದು

ಹೇಳುತ್ತಾರೆ. ದ್ವಾರಕಗಿರಿಯವರ ಮಕ್ಕಳು ಯಾವ ಇಸವಿಯಲ್ಲಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

10. ದಾವಾಸ್ವತ್ತುಗಳಿಗೆ ಸಂಬಂದಪಟ್ಟಂತೆ ನನಗೆ 1960 ನೇ ಇಸವಿಯಿಂದ ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ. 2010 ರಲ್ಲಿ 05 ನೇ ಪ್ರತಿವಾದಿಯು 11 ನೇ ಪ್ರತಿವಾದಿಗೆ ದಾವಾಸ್ವತ್ತಿನ 02 ಎಕರೆ 26 ಗುಂಟೆ ಜಮೀನನ್ನು ದಾನಪತ್ರದ ಮೂಖಾಂತರ ಕೊಟ್ಟಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ದ್ವಾರಕಗಿರಿಯವರು ಖರೀದಿ ಮಾಡಿರುವ ಜಮೀನುಗಳನ್ನು ಅವರೇ ಸಾಗುವಳಿ ಮಾಡಿಕೊಂಡು ಬರುತ್ತಿರುತ್ತಾರೆ ಎಂದರೆ ಸರಿ. 1984 ನೇ ಇಸವಿಯಲ್ಲಿ ಆದಂತಹ ವಿಭಾಗ ಪತ್ರದಲ್ಲಿ ಮತ್ತು ನನ್ನ ತಂದೆ ಬರೆದಂತಹ ವಿಲ್ ನಲ್ಲಿ ದಾವಾಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದರಲ್ಲಿ ನಮಗೆ ಹಿಸ್ಸೆ ಇದೆ ಎಂದು ಹೇಳಿ ಬರೆದಿರುವುದಿಲ್ಲ. ದಾವಾಸ್ವತ್ತಿಗೆ ಸಂಬಂದಪಟ್ಟಂತೆ ಕಂದಾಯ ದಾಖಲೆಗಳು ನನ್ನ ಹೆಸರಿಗೆ ಇರುವುದಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ